# ಚೆಸ್ಸಿಗರ ಜೈತ್ರಯಾತ್ರೆ

## ಒಲಿಂಪಿಯಾಡ್‌ನಲ್ಲಿ ಯುವ ಆಟಗಾರರಿಂದ ಚಿನ್ನದ ಬೇಟೆ!


ವಿಶ್ವ ವಿಜೇತರು... ಒಲಿಂಪಿಯಾಡ್‌ನಲ್ಲಿ ಗೆದ್ದ ಭಾರತ ಮಹಿಳೆಯರ ಮತ್ತು ಪುರುಷರ ತಂಡ

**ವಿಶ್ವ ಚೆಸ್‌ನಲ್ಲೀಗ ಭಾರತದ ಆಟಗಾರರ ಪಾರಮ್ಯ. 45ನೇ ಚೆಸ್ ಒಲಿಂಪಿಯಾಡ್‌ನ ಓಪನ್ ಹಾಗೂ ಮಹಿಳಾ ವಿಭಾಗದಲ್ಲಿ ಭಾರತದ ಯುವ ಆಟಗಾರರ ಸಾಧನೆ ಅಮೋಘ. ಒಲಿಂಪಿಯಾಡ್‌ನಲ್ಲಿ ಮೊದಲ ಬಾರಿಗೆ ಚಿನ್ನ ಗಳಿಸುವುದರೊಂದಿಗೆ, ಭಾರತದ ಚೆಸ್ ಪರಂಪರೆ ಮಗ್ಗುಲು ಬದಲಿಸಿದೆ.**

■ **ನಾಗೇಶ ಶೆಣೈ**

ಭಾರತದ ಚೆಸ್‌ಗೆ ಈಗ ಸುವರ್ಣಯುಗ. ವಿಶ್ವದ 'ಸೂಪರ್ ಪವರ್' ಚೆಸ್ ರಾಷ್ಟ್ರವನ್ನು ನಿರ್ಧರಿಸುವ ವೇದಿಕೆಯಾದ ಒಲಿಂಪಿಯಾಡ್‌ನಲ್ಲಿ ಭಾರತ ಓಪನ್ ಮತ್ತು ಮಹಿಳಾ ವಿಭಾಗಗಳೆರಡರಲ್ಲೂ ಮೊದಲ ಬಾರಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ದಾಖಲಿಸಿದೆ. ವಿಶ್ವದ ಪ್ರಮುಖ ವೈಯಕ್ತಿಕ ಟೂರ್ನಿಗಳಲ್ಲಿ ನಿಯಮಿತವಾಗಿ ಗೆದ್ದು ಸುದ್ದಿಯಾಗುತ್ತಿದ್ದ ಯುವ ಆಟಗಾರರು, ಆಟಗಾರ್ತಿಯರು ಈಗ ತಂಡವಾಗಿ ಆಡುವಾಗಲೂ ಯಾರಿಗೇನೂ ಕಡಿಮೆಯಿಲ್ಲ ಎನ್ನುವಂಥ ಪ್ರದರ್ಶನ ನೀಡಿದ್ದಾರೆ.

ಭಾರತದ ಮಹಾಬಲಿಪುರಂನಲ್ಲಿ ನಡೆದಿದ್ದ 44ನೇ ಒಲಿಂಪಿಯಾಡ್‌ನಲ್ಲಿ ಗೆದ್ದ ಕಂಚಿನ ಪದಕದ ಬಣ್ಣ ಎರಡು ವರ್ಷಗಳ ನಂತರ ಬುಡಾಪೆಸ್ಟ್‌ನಲ್ಲಿ ಬದಲಾಗಿದೆ; ಇನ್ನಷ್ಟು ಹೊಳಪು ಪಡೆದುಕೊಂಡಿದೆ. 45ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತ ಪುರುಷರ ತಂಡ ಗೆದ್ದ ರೀತಿ ಅಧಿಕಾರಯುತವಾಗಿತ್ತು. ಮಹಿಳೆಯರ ವಿಭಾಗದಲ್ಲಿ ಭಾರತ ಕೊನೆಯ ಸುತ್ತಿನವರೆಗೆ ಕಾಯಬೇಕಾದರೂ ಚಿನ್ನದೊಡನೆ ಅಭಿಯಾನ ಮುಗಿಸಿದ್ದು ಮನಮೆಚ್ಚುವಂತೆ ಇತ್ತು.

ಈ ಅಭೂತಪೂರ್ವ ಯಶಸ್ಸು ತೀರಾ ಅನಿರೀಕ್ಷಿತವೇನೂ ಆಗಿರಲಿಲ್ಲ. ವಿಶೇಷವಾಗಿ ಓಪನ್ ವಿಭಾಗದಲ್ಲಿ ಭಾರತ ತಂಡ ಎದುರಾಳಿ ತಂಡಗಳನ್ನು ಸದೆಬಡಿಯುತ್ತ ಚಿನ್ನದತ್ತ ಮುನ್ನುಗ್ಗಿದ ರೀತಿ ಕ್ರ್ಯಾಸ್ಟ್ರೋವ್, ಹಿಕಾರು ನಕಾಮುರಾ ಮೊದಲಾದ ದಿಗ್ಗಜರ ಶ್ಲಾಘನೆಗೆ ಪಾತ್ರವಾಯಿತು. ಜೊತೆಗೆ ಅವರು ತಲೆಮಾರುಗಳಿಂದ ಭಾರತದ ಚೆಸ್ ಮೇಲೆ ಗಾಢ ಪ್ರಭಾವ ಬೀರಿರುವ 'ವಿಶಿ' (ವಿಶ್ವನಾಥನ್ ಆನಂದ್) ಅವರನ್ನೂ ನೆನೆಯಲು ಮರೆಯಲಿಲ್ಲ.

'ವಿಶಿ (ಸಲಹಿದ) ಮಕ್ಕಳೆಲ್ಲ ಈಗ ಪ್ರವರ್ಧಮಾನಕ್ಕೆ ಬಂದಿದ್ದಾರೆ. ಆಟ ಈಗ ತವರಿಗೇ ಮರಳುತ್ತಿದೆ' ಎಂಬರ್ಥದಲ್ಲಿ ಚೆಸ್ ದಿಗ್ಗಜ ಗ್ಯಾರಿ ಕ್ಯಾಸ್ಪರೋವ್ ಅವರು ಎಕ್ಸ್‌ನಲ್ಲಿ ಬರೆದರು. 'ವಿಶಿ' ಹಾಕಿಕೊಟ್ಟ ಪರಂಪರೆ ಸುಭದ್ರವಾಗಿದೆ ಎಂಬುದು ನಕಾಮುರಾ ಪೋಸ್ಟ್‌ನ ಸಾರಾಂಶವಾಗಿತ್ತು. ಭಾರತದಲ್ಲಿ ಚೆಸ್ ಕ್ರಾಂತಿಗೆ ಮುನ್ನುಡಿ ಬರೆದಿದ್ದ ವಿಶಿ ಅವರು ಒಲಿಂಪಿಯಾಡ್‌ನಲ್ಲಿ ಹಾಜರಿದ್ದುದು ಭಾರತದ ಸಂಭ್ರಮಕ್ಕೆ ಹೆಚ್ಚಿನ ಮೆರುಗು ಮೂಡಿಸಿತು.

ಅರ್ಜುನ್ ಇರಿಗೇಶಿ, ಡಿ. ಗುಕೇಶ್, ಪ್ರಜ್ಞಾನಂದ, ವಿದಿತ್ ಗುಜರಾತಿ, ಪಿ. ಹರಿಕೃಷ್ಣ– ಪ್ರತಿಭಾನ್ವಿತರ ದಂಡನ್ನೇ ಹೊಂದಿದ್ದ ಭಾರತ ಒಂದು ಸುತ್ತನ್ನು (ಉಜ್ಬೇಕಿಸ್ತಾನ ವಿರುದ್ಧ) ಡ್ರಾ ಮಾಡಿಕೊಂಡಿದ್ದು ಬಿಟ್ಟರೆ, ಉಳಿದ ಹತ್ತು ಸುತ್ತುಗಳಲ್ಲೂ ಜಯಭೇರಿ ಮೊಳಗಿಸಿತು. ಗರಿಷ್ಠ 22ರಲ್ಲಿ 21 ಪಾಯಿಂಟ್ಸ್ ಕಲೆಹಾಕಿ, ಸಮೀಪದ ಎದುರಾಳಿಗಳನ್ನು ನಾಲ್ಕು ಪಾಯಿಂಟ್ ಅಂತರದಿಂದ ಹಿಂದೆ ಹಾಕಿದ್ದು ಅಶ್ವಮೇಧ ಕುದುರೆಯ ಓಟದಂತಿತ್ತು.

ಗ್ರ್ಯಾಂಡ್‌ಮಾಸ್ಟರ್‌ಗಳಾದ ಫ್ಯಾಬಿಯಾನೊ ಕರುವಾನಾ, ವೆಸ್ಲಿ ಸೊ, ಲೆವೊನ್ ಅರೊನಿಯನ್ ಮೊದಲಾದ ತಾರೆಗಳನ್ನು ಒಳಗೊಂಡ ಪ್ರಬಲ, ಅಗ್ರ ಶ್ರೇಯಾಂಕದ ಅಮೆರಿಕವನ್ನು 9ನೇ ಸುತ್ತಿನಲ್ಲಿ 2.5–1.5ರಿಂದ ಸೋಲಿಸಿದ್ದು ಭಾರತದ ಪ್ರಾಬಲ್ಯಕ್ಕೆ ಕನ್ನಡಿಯಾಯಿತು.

ದುರ್ಬಲ ಮೊರಾಕ್ಕೊ ವಿರುದ್ಧ ಮೊದಲ ಪಂದ್ಯದಲ್ಲಿ ವಿಶ್ರಾಂತಿ ಪಡೆದಿದ್ದ ಗುಕೇಶ್, 'ಮೊದಲ ಬೋರ್ಡ್'ನಲ್ಲಿ ಉಳಿದ 10 ಸುತ್ತುಗಳಿಂದ 9 ಪಾಯಿಂಟ್ಸ್ (8 ಗೆಲುವು, ಎರಡು ಡ್ರಾ) ಕಲೆಹಾಕಿದ್ದು ಅವರ ಸಾಮರ್ಥ್ಯಕ್ಕೆ ಕನ್ನಡಿ. 'ಮೊದಲ ಬೋರ್ಡ್' ಎಂದರೆ ಅದರಲ್ಲಿ ಇತರ ದೇಶಗಳ ಅಗ್ರ ಆಟಗಾರರು ಆಡುತ್ತಾರೆ. ಹೀಗಾಗಿ ಅವರ ಸಾಧನೆ ಮೆಚ್ಚುವಂಥದ್ದು. ಮೂರನೇ ಬೋರ್ಡ್‌ನಲ್ಲಿ ಇರಿಗೇಶಿ ಹೆಸರಿಗೆ ತಕ್ಕಂತೆ ಅರ್ಜುನನಂತೆ ಕಾದಾಡಿ 11 ಸುತ್ತುಗಳಿಂದ 10 ಪಾಯಿಂಟ್ಸ್ ಕಲೆಹಾಕಿದರು. 9 ಗೆಲುವು, ಎರಡು ಡ್ರಾ. ಅದರಲ್ಲೂ ಆರು ಗೆಲುವು ಸತತವಾಗಿ ಬಂದಿದ್ದು ವಾರಂಗಲ್‌ನ ಯುವಕ ಎಂಥ ಲಯದಲ್ಲಿದ್ದರು ಎಂಬುದನ್ನು ತೋರಿಸಿತು. ಅವರಿಗೂ ವೈಯಕ್ತಿಕ ಚಿನ್ನ ಒಲಿಯಿತು. ಅವರನ್ನು ಮೂರನೇ ಬೋರ್ಡ್‌ನಲ್ಲಿ ಆಡಿಸಿದ್ದು ಭಾರತದ ತಂತ್ರಗಾರಿಕೆಯನ್ನು ಪ್ರದರ್ಶಿಸಿತು.

ಕಳೆದ ವರ್ಷ ವಿಶ್ವಕಪ್ ಫೈನಲ್ ಆಡಿದ್ದ ಅತಿ ಕಿರಿಯ ಆಟಗಾರ ಪ್ರಜ್ಞಾನಂದ ಒಳ್ಳೆಯ ಲಯದಲ್ಲಿರಲಿಲ್ಲ. ಅವರು ಗ್ರ್ಯಾಂಡ್ ಚೆಸ್ ಟೂರ್‌ನ ಎರಡು ಟೂರ್ನಿಗಳಲ್ಲಿ (ಅಮೆರಿಕದ ಸೇಂಟ್ ಲೂಯಿಯಲ್ಲಿ) ಪರದಾಡಿದ್ದರು. ಆದರೆ ಇಲ್ಲಿ ಒಂದು ಪಂದ್ಯ ಮಾತ್ರ ಸೋತರೂ ನಿರ್ಣಾಯಕ ಪಂದ್ಯಗಳಲ್ಲಿ ಗೆದ್ದು ತಂಡಕ್ಕೆ ಬೆಂಬಲವಾದರು.